**ಓ.ಎಸ್. ನಂ. 242/2010 ಡಿ .ಡಬ್ಲೂ-1 ಹೆಸರು - ಶಿವಣ್ಣ**

**ಸಾಕ್ಷಿಯನ್ನು ದಿನಾಂಕಃ 31/01/2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಎಸ್.ಕೆ. ವಾದಿ ಪರ ವಕೀಲರಿಂದಃ-**

ಪಟೇಲ್ ಮರಿಗೌಡರವರು 2 ನೇ ಪ್ರತಿವಾದಿ ಮರಮ್ಮ ರವರಿಗೆ 1985 ರಲ್ಲಿ ಮರಣ ಶಾಸನ ಪತ್ರ ಬರೆದಿರುತ್ತಾರೆ. ಪಟೇಲ್ ಮರಿಗೌಡರವರು 2 ನೇ ಪ್ರತಿವಾದಿ ಮರಮ್ಮ ರವರಿಗೆ 1985 ರಲ್ಲಿ ಮರಣ ಶಾಸನ ಪತ್ರ ಬರೆದಿದ್ದರು ಎನ್ನಲಾದ ಕಾಲಕ್ಕೆ ಅವರ ಕುಟುಂಬದಲ್ಲಿ ವಿಭಾಗವಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪಟೇಲ್ ಮರಿಗೌಡರವರ ಕುಟುಂಬದವರು ವ್ಯವಸಾಯದ ಹಿನ್ನಲೆಯವರು ಎಂದರೆ ನನಗೆ ಗೊತ್ತಿಲ್ಲ. ಪಟೇಲ್ ಮರಿಗೌಡ ಮತ್ತು ಅವರ ಕುಟುಂಬದವರು ಎಲ್ಲರೂ ಸೇರಿ ಒಟ್ಟಾಗಿ ದುಡಿದು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಪಟೇಲ್ ಮರಿಗೌಡರವರ ತಂದೆಯ ಬಗ್ಗೆ ನನಗೆ ಗೊತ್ತಿಲ್ಲ.

2 ನೇ ಪ್ರತಿವಾದಿ ಮರಮ್ಮರವರು ಅವರ ತಂದೆಗೆ ಪುಸಲಾಯಿಸಿ ಅವರಿಗೆ ಗೊತ್ತಾಗದಂತೆ ಮರಣ ಶಾಸನ ಪತ್ರ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮರಮ್ಮ ಮತ್ತು ಅವರ ಗಂಡ ಚಾಮಲಾಪುರದ ಹುಂಡಿ ಗ್ರಾಮದಲ್ಲಿ ಇದ್ದರು. ನಿಡಿ-7 ರಲ್ಲಿ ಮರಣ ಶಾಸನ ಪತ್ರದ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿ. ನಿಡಿ-9 ಅನ್ನು ಈ ದಾವೆಯು ಚಾಲ್ತಿಯಲ್ಲಿರುವಾಗ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತಾಗಿರುವುದರಿಂದ ಪಟೇಲ್ ಮರಿಗೌಡ ರವರಿಗೆ ಮರಣ ಶಾಸನ ಪತ್ರ ಬರೆಯಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ಆಧಾರದ ಮೇಲೆ 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ವರ್ಗಾವಣೆ ಆಗಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತಾಗಿರುವುದರಿಂದ ವಾದಿಗೆ ಸಮಾನವಾದ ಹಿಸ್ಸೆ ಹಕ್ಕು ಇದೆ ಎಂದರೆ ಸರಿಯಲ್ಲ.

( ಪ್ರತಿವಾದಿ 1 ಮತ್ತು 10 ಮತ್ತು ಅವರ ಪರ ವಕೀಲರನ್ನು ಕರೆಸಲಾಯಿತು ಅವರು ಗೈರು ಹಾಜರು ಇರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**